**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ. ಸಿ.ಸಿ ನಂ.844/2023.**

ಪಿರ್ಯಾದುದಾರರುಃ- ಸೇಂಟ್ ಮಿಲಾಗ್ರೀಸ್ ಕ್ರೆಡಿಟ್ ಸೌಹಾರ್ಧ ಕೊ-ಆಪರೇಟಿವ್ ಲಿ.,
ಶಾಖೆಃ ಚಂದಾವರ,
ಪ್ರತಿನಿಧಿಸುವವರು, ನಿಷ್ಪತ್ ಮ್ಯಾನೇಜರ,
ಶ್ರೀ ವಿನಾಯಕ ರಾಮದಾಸ ಮಡಿವಾಳ.

**-ವಿರುದ್ಧ-**

ಆರೋಪಿಯ ಹೆಸರುಃ- ಸಚಿನ ಗಂಗಾಧರ ದೇಶಭಂಡಾರಿ,
ಸಾಕೀನಃ- ಮಠ,
ಪೋಸ್ಟಃ ಧಾರೇಶ್ವರ,
ತಾಲೂಕುಃ- ಕುಮಟಾ, (ಉ.ಕ.).

**ಆಪಾದನೆ**

ಶ್ರೀ ಅನಿಲ್ ಜೋನ್ ಸಿಕ್ವೇರಾ., ಬಿ.ಬಿ.ಎ.,ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡ ಆಪಾದನೆ ಹೊರಿಸುತ್ತಿದ್ದೇನೆ.

ಆರೋಪಿಯಾದ ನೀವು ಪಿರ್ಯಾದಿಯವರ ಸಂಸ್ಥೆಯಲ್ಲಿ ಸಾಲದ ಖಾತೆ ನಂ.ಬಿ.ಎಲ್.1097 ರಂತೆ ಸಾಲವನ್ನು ಪಡೆದುಕೊಂಡಿದ್ದು, ಸದರಿ ಸಾಲಕ್ಕೆ ಸಂಬಂಧಪಟ್ಟಂತೆ ನೀವು ಪಿರ್ಯಾದಿ ಸಂಸ್ಥೆಯ ಹೆಸರಿಗೆ ನಿಮ್ಮ ಬ್ಯಾಂಕ್ ಖಾತೆಯುಳ್ಳ **ಕೆನರಾ ಬ್ಯಾಂಕ್., ಕುಮಟಾ** ಶಾಖೆಯ ಚೆಕ್ ನಂ.164489 ನ್ನು ದಿನಾಂಕ 08-04-2023 ರಂದು ರೂ.1,10,753/- ಎಂದು ನಮೂದಿಸಿ ಚೆಕ್ ಗೆ ಸಹಿ ಮಾಡಿಕೊಟ್ಟು, ಸದರಿ ಚೆಕ್ ನ್ನು ಬ್ಯಾಂಕ್ ಗೆ ಹಾಜರುಪಡಿಸಿದ ಕೂಡಲೇ ಹಣ ಸಿಗುತ್ತದೆ ಎಂದು ಭರವಸೆ ನೀಡಿದ್ದು, ಅದರಂತೆ ಪಿರ್ಯಾದಿಯವರು ಹಣ ಪಡೆಯುವ ಸಲುವಾಗಿ ಸದರಿ ಚೆಕನ್ನು ಅವರ ಸಂಸ್ಥೆಯ ಖಾತೆಯಿರುವ **ಕೆನರಾ ಬ್ಯಾಂಕ್., ಚಂದಾವರ** ಶಾಖೆಯಲ್ಲಿ ಹಾಜರುಪಡಿಸಿದಾಗ, ಸದರಿ ಬ್ಯಾಂಕ್ ನವರು, 'Funds Insufficient' ಎಂದು ತಿಳಿಸಿ ಸದರಿ ಚೆಕನ್ನು ದಿನಾಂಕ 18-05-2023 ರಂದು ಮೆಮೋದೊಂದಿಗೆ ವಾಪಾಸ್ ನೀಡಿರುತ್ತಾರೆ. ಈ ಕುರಿತು ಪಿರ್ಯಾದಿಯವರು ನಿಮಗೆ ವಕೀಲರ ಮೂಲಕ ದಿನಾಂಕ 20-06-2023 ರಂದು ರಿಜಿಸ್ಟರ್ ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸ್ ನಿಮಗೆ ದಿನಾಂಕ 01-07-2023 ರಂದು ಜಾರಿಯಾಗಿದ್ದರೂ ಸಹ ನೀವು ಸದರಿ ಚೆಕ್ ನಲ್ಲಿ ನಮೂದಿಸಿದ ಹಣವನ್ನು

ಸಹ ನೀಡದೇ  ನೆಗೋಶಿಯೇಬಲ್ ಇನ್ ಸ್ಟ್ರುಮೆಂಟ್ ಕಾಯಿದೆ  ಕಲಂ. 138 ರಡಿಯಲ್ಲಿ  ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು  ಆರೋಪಿಸಲಾಗಿದೆ.

ಪ್ರಶ್ನೆ1:  ಈಗ  ನಿಮಗೆ  ಓದಿ  ಹೇಳಿದ  ಆಪಾದನೆ ತಿಳಿಯಿತೇ?

ಆರೋಪಿಯ  ಉತ್ತರ :  ತಿಳಿಯಿತು

ಪ್ರಶ್ನೆ 2:   ಸದ್ರಿ  ಆಪಾದನೆಯನ್ನು   ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ?

ಆರೋಪಿಯ ಉತ್ತರ : ವಿಚಾರಣೆಯಾಗಬೇಕು

(ಈ  ಮೂಲಕ  ಪ್ರಮಾಣಿಸುವುದೇನೆಂದರೆ ಆರೋಪಿಯು  ಕೊಟ್ಟಂತ  ಹೇಳಿಕೆಯ ಉತ್ತರವನ್ನು  ಪಡೆಯಲಾಗಿದೆ )

ಸಹಿ ಇದೆ/-

**ದಿನಾಂಕಃ- 05-01-2026.**

**(ಅನಿಲ್ ಜೋನ್ ಸಿಕ್ವೇರಾ)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ.,ಯವರ ನ್ಯಾಯಾಲಯ.,ಹೊನ್ನಾವರ.**

****

ಆರೋಪಿಯ  ಸಹಿಃ-   ಸಹಿ ಇದೆ.